# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಡಿಸೆಂಬರ್ 2024** ಬೆಂಗಳೂರು, ಸಂಪುಟ 10, ಸಂಚಿಕೆ 08, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ

Kannada monthly, **10 December 2024**, Bengaluru, Vo 10, Issue No.08 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription : Annual Rs. 30; Life : Rs. 500/-

ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


## ಧಮ್ಮ ಪದಗಳು

| | |
|---|---|
| ಅಕತಂ ದುಕ್ಕಟಂ ಸೆಯ್ಯೋ<br>ಪಚ್ಛಾ ತಪ್ಪತಿ ದುಕ್ಕಟಂ,<br>ಕತಂಚ ಸುಕತಂ ಸೆಯ್ಯೋ<br>ಯಂ ಕತ್ವಾ ನಾನುತಪ್ಪತಿ. | ಕೆಟ್ಟ ಕಾರ್ಯವನ್ನು ಬಿಡುವುದು ಒಳ್ಳೆಯದು. ಆ ಅಕಾರ್ಯದಿಂದಾಗಿ ಅನಂತರ ಅವನು ಕೊರಗಬೇಕಾಗುತ್ತದೆ. ಆದರೆ ಒಳ್ಳೆಯ ಕಾರ್ಯವನ್ನು ಮಾಡುವುದು ಒಳ್ಳೆಯದು. ಏಕೆಂದರೆ ಆ ಒಳ್ಳೆಯ ಕಾರ್ಯದಿಂದಾಗಿ ಅನಂತರ ಅವನು ಕೊರಗಬೇಕಾಗಿಲ್ಲ. |

ಧಮ್ಮಪದ– 214, ದುರ್ಗತಿವರ್ಗ

## ಮುಂಬಯಿಯಿಂದ ದೆಹಲಿಗೆ

(ಅಣ್ಣನ ಮೂಲಕ ಹಿಂದಿಯಲ್ಲಿ ಸಯಾಜಿ ಉ ಬಾ ಖಿನ್ ಅವರಿಗೆ ಬರೆದ ಪತ್ರ)

10 ಅಕ್ಟೋಬರ್ 1969, ಕಲ್ಕತ್ತಾ

ಪ್ರೀತಿಯ ಬಾಬು ಭೈಯ, ಸಾದರ ಪ್ರಣಾಮಗಳು!

ಸಾರನಾಥದ ಶಿಬಿರದ ಬಗ್ಗೆ ಬರೆಯುವ ಮೊದಲು, ನಾನು ಮುಂಬಯಿಯಿಂದ ಆಂಧ್ರಪ್ರದೇಶದ ತಾಡೆಪಲ್ಲಿಗುಡಂನ ನನ್ನ ಪ್ರಯಾಣದ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ.

ಮುಂಬಯಿಯಿಂದ ದೆಹಲಿಗೆ ಹೋಗುವ ಮೊದಲು ಒಂದು ದಿನದ ಮಟ್ಟಿಗೆ ನಾನು ವಾರ್ಧಾಕ್ಕೆ ಹೋಗಲು ತೀರ್ಮಾನಿಸಿದೆ.

**ರಾಷ್ಟ್ರೀಯ ಭಾಷಾ ಉತ್ತೇಜನ ಸಮಿತಿ, ವಾರ್ಧಾ.**

ಸಮಿತಿಯ ವಿಶಾಲಪ್ರದೇಶದಲ್ಲಿ, ಪತ್ರಿಕಾ ಕಚೇರಿ ಮತ್ತು ದೊಡ್ಡ ಸಭಾಂಗಣ, ಜೊತೆಗೆ ನೌಕರರ ವಸತಿಗೃಹಗಳು ಇವೆ. ಈ ವಿಶಾಲ ಜಾಗದಲ್ಲಿ ಒಂದು ಶಾಲೆಯೂ ನಡೆಯುತ್ತಿದೆ. ಈ ಶಾಲೆಯಲ್ಲಿ ಹಿಂದಿ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಿಂದ ಬಂದು ಹಿಂದಿ ಭಾಷೆಯನ್ನು ಕಲಿಯುತ್ತಾರೆ. ಅವರ ವಿದ್ಯಾರ್ಥಿನಿಲಯವೂ ಅಲ್ಲಿದೆ. ಅಲ್ಲಿ ವಿದ್ಯಾಭ್ಯಾಸ ಮಾಡಿದ ನಾಗಾ ಜನಾಂಗದ ಯುವಕರು ಮತ್ತು ಲುಷಾಯಿ ಜನಾಂಗದ ಪುರುಷರು ಮತ್ತು ಮಹಿಳೆಯರು ಈ ಉಪನ್ಯಾಸಕ್ಕಾಗಿ ಅಲ್ಲಿ ಸೇರಿದ್ದರು. ಸಮಿತಿಯ ಉದ್ಯಾನವನದಲ್ಲಿ ನಾನು ಗುಲ್ಮೊಹರ್ ಮರದ ಸಸಿ ನೆಟ್ಟೆ. ಈ ಸಮಯದಲ್ಲಿ ಸಮಿತಿಯ ನೌಕರರು ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.

ನನ್ನ ಪರಿಚಯ ಮಾಡುವಾಗ ಮೋಹನ್‌ಭಾಯ್ ಮತ್ತು ದಯಾಳ್ ದುಬೆಯವರು ಬಹಳ ಆತ್ಮೀಯವಾಗಿ ಮಾತಾಡಿದರು. ಅವರ ಅಭಿಮಾನದ ಮಾತುಗಳು ನಾವು ಬರ್ಮಾ ದೇಶದಲ್ಲಿ ಹಿಂದಿ ಭಾಷೆಗೆ ಸಂಬಂಧಿಸಿ ಮಾಡುತ್ತಿದ್ದ ಸೇವೆಗೆ ಎಂಬುದು ನನಗೆ ತಿಳಿದಿತ್ತು. ವಾಸ್ತವವಾಗಿ ಇದರ ಬಹುತೇಕ ಗೌರವವು ಡಾ॥ ಓಂಪ್ರಕಾಶ್ ಅವರಿಗೆ, ಅವರ ಕುಟುಂಬಕ್ಕೆ ಮತ್ತು ಹಿಂದಿ ಭಾಷೆಯ ಅನೇಕ ಸಕ್ರಿಯ ಬೆಂಬಲಿಗರಿಗೆ ಸಲ್ಲುತ್ತೆ ಈ ಗೌರವವು ನನಗಲ್ಲ, ಆ ಎಲ್ಲಾ ಸ್ನೇಹಿತರಿಗೆ ಎಂದು ನನಗನ್ನಿಸಿತು ಮತ್ತು ಇದನ್ನು ನಾನು ನನ್ನ ಭಾಷಣದಲ್ಲಿ ಹೇಳಿದೆ.

ಹಿಂದಿ ಭಾಷೆಗೆ ಸಂಬಂಧಿಸಿ ಬರ್ಮಾದಲ್ಲಿ ಸದ್ಯ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಮತ್ತು ಅಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನಾನು ಸಂಕ್ಷಿಪ್ತವಾಗಿ ವಿವರಿಸಿದೆ. ಕಾರ್ಯಕ್ರಮ ಮುಗಿದ ಮೇಲೆ ಮೋಹನ್ ಭಾಯ್ ಮತ್ತು ರಾಮೇಶ್ವರ್ ದಯಾಳ್ ದುಬೆಯವರ ಜೊತೆ ನಮ್ಮ ಸಮಸ್ಯೆಗಳ ಕುರಿತು ಒಂದು ಗಂಟೆಯ ಕಾಲ ಚರ್ಚೆ ನಡೆಯಿತು. ಇಬ್ಬರೂ ನಮ್ಮ ಸಮಸ್ಯೆಗಳ ಬಗ್ಗೆ ಬಹಳ ಸಹಾನುಭೂತಿ ತೋರಿಸಿದರು. ಸಮಿತಿಯು ಹಣಕಾಸಿನ ನೆರವು ನೀಡಲು ಶಕ್ತವಾಗಿಲ್ಲ, ಆದರೆ ಉಳಿದ ಎಲ್ಲಾ ರೀತಿಯ ಸಹಕಾರ ಭರವಸೆ ನೀಡಿದರು. ನಾವು ಬರೆದಿರುವ ಪದ್ಯ ಮತ್ತು ಗದ್ಯದ ಪುಸ್ತಕಗಳನ್ನೇ ಆರಂಭಿಕ ತರಬೇತಿಗೆ ಉಪಯೋಗಿಸಲು ಒಪ್ಪಿದರು. ಇವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಕಳುಹಿಸುವುದಾಗಿ ತಿಳಿಸಿದ್ದಾರೆ. ಉತ್ತರ ಪತ್ರಿಕೆಗಳ ಮೌಲ್ಯ ಮಾಪನವನ್ನು ಬರ್ಮಾದಲ್ಲೇ ಮಾಡಲು ಮತ್ತು ಈ ಮಾರ್ಕ್ಸ್‌ಗಳ ಆಧಾರದ ಮೇಲೆ ಪರೀಕ್ಷಾ ಫಲಿತಾಂಶ ನೀಡಿ ಪ್ರಮಾಣ ಪತ್ರವನ್ನು ಸಮಿತಿಯು ನೀಡುವುದಾಗಿ ತಿಳಿಸಿದರು. ಈಗಿರುವ ಹೆಸರಿನಲ್ಲಿಯೇ ಪಠ್ಯಪುಸ್ತಕಗಳನ್ನು ಮುದ್ರಿಸಲು ಅಥವಾ ನಮಗೆ ಬೇಕೆನಿಸಿದರೆ, ಬೇರೆ ಹೆಸರಿನಲ್ಲಿಯೂ ಮುದ್ರಿಸಲು ಅನುಮತಿಸಿದರು. ನಮ್ಮ ಪ್ರಯತ್ನಗಳಿಂದ ಪ್ರಭಾವಿತರಾಗಿ ಮೋಹನ್‌ಭಾಯ್ ಅವರು ನನ್ನ ಜೊತೆ ದೆಹಲಿವರೆಗೂ ಬಂದು ಕೇಂದ್ರ ಸರ್ಕಾರದೊಡನೆ ನಮ್ಮ ಪರವಾಗಿ ಮಾತಾಡುವ ಇಚ್ಛೆಯನ್ನೂ ವ್ಯಕ್ತಪಡಿಸಿದರು. ಇಲ್ಲಿ ಪ್ರತಿಯೊಂದನ್ನೂ ಸುವ್ಯವಸ್ಥಿತವಾಗಿ ಮಾಡಿದ್ದರು.

**ಮಹಾತ್ಮಗಾಂಧಿ ಆಶ್ರಮ, ಸೇವಾಗ್ರಾಮ, ವಾರ್ಧಾ**

ಮಧ್ಯಾಹ್ನದ ಊಟವಾದ ಮೇಲೆ ನಾನು ಸೇವಾಗ್ರಾಮಕ್ಕೆ ಹೋಗುವ ಯೋಜನೆ ಹಾಕಿಕೊಂಡಿದ್ದೆ. ಇಲ್ಲಿಯವರೆಗೂ ಬಂದು, ಗಾಂಧೀಜಿ ಆಶ್ರಮಕ್ಕೆ ಭೇಟಿಕೊಡದೆ ಹೋಗುವುದು ಸರಿಯಲ್ಲ, ಅದೂ ಅವರ ಶತಮಾನೋತ್ಸವ ವರ್ಷದಲ್ಲಿ. ಇಲ್ಲಿಂದ ಅದು 8–9 ಕಿಲೋಮೀಟರ್ ದೂರದಲ್ಲಿತ್ತು. ಆಶ್ರಮದ ಪ್ರತಿಯೊಂದು ಭಾಗವನ್ನೂ ಕೂಲಂಕುಷವಾಗಿ ನೋಡುವ ಬಯಕೆ ನನ್ನದಾಗಿತ್ತು, ಆದರೆ ಸಮಯ ಬಹಳ ಕಡಿಮೆಯಿತ್ತು. ಆಶ್ರಮದ ಸಹಾಯಕರೊಬ್ಬರ ಜೊತೆಗೂಡಿ ಎಷ್ಟು ಸಾಧ್ಯವೋ ಅಷ್ಟನ್ನು ನೋಡಿದೆ. ಗಾಂಧೀಜಿಯವರ ಗುಡಿಸಲನ್ನು ನೋಡಿದೆ. ಅದು ನನ್ನ ಮೇಲೆ ಅಗಾಧವಾದ ಪರಿಣಾಮ ಬೀರಿತು. ಒಬ್ಬ ಸಾರ್ವಜನಿಕ ವ್ಯಕ್ತಿಯು ಇಂತಹ ಅತಿರೇಕದ ಸರಳತೆಯಲ್ಲಿ ತನ್ನ ಜೀವನ ಹೇಗೆ ಕಳೆದರು ಎಂಬುದನ್ನು ನೋಡಿದೆ. ಮಣ್ಣಿನ ನೆಲ, ಮಣ್ಣಿನ ಗೋಡೆ, ಹುಲ್ಲಿನ ಹೊದಿಕೆ. ಇದೇ ಗಾಂಧೀಜಿಯ ಗುಡಿಸಲು.

ಅವರು ಕುಳಿತುಕೊಳ್ಳುವ ಸ್ಥಳ, ಅತಿಥಿಗಳು ನಿರೀಕ್ಷಿಸುವ ಸ್ಥಳ– ಪಟ್ಟಣದ ಜನರು ನಿಬ್ಬೆರಗಾಗಲು ಇವಿಷ್ಟೇ ಸಾಕಾಗಿತ್ತು. ಪಕ್ಕದ ಕೋಣೆಯಲ್ಲಿ ಗಾಂಧೀಜಿಯ ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ಚಿಕಿತ್ಸಾಲಯವಿತ್ತು. ಈ ಚಿಕ್ಕ ಗುಡಿಸಿಲಿನಲ್ಲಿ ದೇಶದ ಅತ್ಯಂತ ದೊಡ್ಡ ರಾಜಕೀಯ ಚಳುವಳಿಗಳನ್ನು ನಿರ್ದೇಶಿಸಲಾಗುತ್ತಿತ್ತು, ಪ್ರಮುಖವಾದ, ಕ್ಲಿಷ್ಟಕರವಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲಾಯಿತು. ಹತ್ತಿರದಲ್ಲಿಯೇ ಕಸ್ತೂರಬಾ ಗಾಂಧಿಯವರ ಗುಡಿಸಲನ್ನು ನೋಡಿದೆ. ಅಲ್ಲಿಂದ ಕೆಳಗೆ, ಗಾಂಧೀಜಿಯವರು ವೈಯಕ್ತಿಕವಾಗಿ ಕುಷ್ಠ ರೋಗಿಗಳ ಶುಶ್ರೂಷೆ ಮಾಡುತ್ತಿದ್ದ ಮತ್ತೊಂದು ಗುಡಿಸಲನ್ನು ಕಂಡೆ.

ಇದರ ನಂತರ ನಮ್ಮ ಸಂಭಾಷಣೆಯನ್ನು ಖಾದಿ ಮತ್ತು ಚರಕದ ಕಡೆ ತಿರುಗಿಸಿದೆ. ನಾನು ನನ್ನ ದೇಶ, ಬರ್ಮಾದಲ್ಲಿ ಎರಡು ಉದ್ದೇಶಗಳಿಗಾಗಿ ಚರಕವನ್ನು ಪ್ರೋತ್ಸಾಹಿಸಲು ಇಚ್ಛಿಸುತ್ತೇನೆ ಎಂದು ನಾನು ಅವರಿಗೆ ಹೇಳಿದೆ. ಮೊದಲನೆಯದಾಗಿ, ನಮ್ಮ ದೇಶದ ರೈತರು ಕೃಷಿ ಕೆಲಸ ಮುಗಿಸಿದ ಮೇಲೆ, ವರ್ಷದ ಒಂದು ಭಾಗವನ್ನು ಏನೂ ಕೆಲಸವಿಲ್ಲದೆ ಕಳೆಯುತ್ತಾರೆ. ಈ ಅವಧಿಯಲ್ಲಿ ಇದು ಒಂದು ಸುಲಭವಾದ ಮತ್ತು ಉಪಯುಕ್ತವಾದ ಉದ್ಯೋಗ ನೀಡುತ್ತದೆ. ಎರಡನೆಯದಾಗಿ, ಕಚ್ಚಾವಸ್ತುಗಳನ್ನು ರಫ್ತುಮಾಡಿ, ಸಿದ್ಧವಸ್ತುಗಳನ್ನು ಆಮದು ಮಾಡಿಕೊಳ್ಳುವ ಆರ್ಥಿಕ ವ್ಯವಸ್ಥೆಯಿಂದ ಆಗುವ ಅಪವ್ಯಯವನ್ನು ತಪ್ಪಿಸಬಹುದು. ಈ

ರೀತಿಯಾಗಿ ನಮ್ಮ ದೇಶದ ಪ್ರಜೆಗಳಿಗೆ ತಮ್ಮ ಬಟ್ಟೆಯನ್ನು ತಾವೇ ನೇಯ್ದುಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಬಹುದು. ಹಾಗಾಗಿ ಈ ಸಣ್ಣ ಉದ್ಯಮದ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಬೇಕು ಎಂದು ತಿಳಿಸಿದೆ.

ಇದಾದ ಮೇಲೆ ಸದಾಶಿವ ಭಟ್ ಅವರು ನನ್ನನ್ನು ಶ್ರೀಮತಿ ಆಶಾದೇವಿ ಆರ್ಯನಾಯಕಮ್ ಅವರ ಬಳಿ ಕರೆದುಕೊಂಡು ಹೋದರು. ಇವರು ಹೆಸರಾಂತ ಗಾಂಧೀವಾದಿ ಮತ್ತು ಸಿಂಹಳ ಸಹೋದರ ಶ್ರೀ ಆರ್ಯನಾಯಕಮ್ ಅವರ ಬಂಗಾಳಿ ಹೆಂಡತಿ. ಆಶ್ರಮದ ಮೂಲಭೂತ ಶಿಕ್ಷಣ ವಿಭಾಗವನ್ನು ಇವರು ನಡೆಸುತ್ತಿದ್ದರು. ಅವರ ಜೊತೆ ಮಾತಾಡಿದ್ದು ನನಗೆ ಬಹಳ ಸಂತೋಷವಾಯಿತು. ಬಿಳಿಯ ಕೂದಲಿನ, ಚೈತನ್ಯದಾಯಕವಾದ ಈ ಮಹಿಳೆಯೊಂದಿಗೆ ಮಾತಾಡಿದ್ದು ನನಗೆ ಬಹಳ ಸ್ಫೂರ್ತಿದಾಯಕವಾಗಿತ್ತು. ನನಗೆ ವಿದಾಯ ಹೇಳುವಾಗ ಇದ್ದಕ್ಕಿದ್ದಂತೆ ಅವರು, ತನ್ನ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಬರ್ಮಾ ಸರ್ಕಾರ ವಶಪಡಿಸಿಕೊಂಡಿದ್ದರೂ, ಅವರ ಬಗ್ಗೆ ಕಿಂಚಿತ್ತೂ ದ್ವೇಷವಿಲ್ಲದ ಬರ್ಮಾದ ಅನಿವಾಸಿಯನ್ನು ಭೇಟಿ ಮಾಡಿದ್ದು ನನಗೆ ಸಂತೋಷ ತಂದಿದೆ ಎಂದು ಹೇಳಿದರು.

ಆಶ್ರಮದ ಪುಸ್ತಕ ಮಾರಾಟ ವಿಭಾಗಕ್ಕೂ ನಾನು ಭೇಟಿಕೊಟ್ಟೆ. ನಾನು ಕೆಲವು ಪುಸ್ತಕಗಳನ್ನು ಕೊಂಡುಕೊಂಡು ಅವುಗಳನ್ನು ನಿಮ್ಮ ರಂಗೂನ್ ವಿಳಾಸಕ್ಕೆ ಪಾರ್ಸಲ್ ಮಾಡಲು ಭಟ್ ಅವರನ್ನು ವಿನಂತಿಸಿದೆ. ಇಷ್ಟೊತ್ತಿಗಾಗಲೇ ನಿಮಗೆ ಪಾರ್ಸಲ್ ತಲುಪಿರಬಹುದು. ಅದರ ಬಗ್ಗೆ ನನಗೆ ಬರೆದು ತಿಳಿಸಿ.

### ಭಿಕ್ಖು ಆನಂದ್ ಕೌಸಲ್ಯನ್ ಅವರೊಡನೆ ಮಾತುಕತೆ

ವಾರ್ಧಾದಿಂದ ನಾಗಪುರಕ್ಕೆ ರಾತ್ರಿ 7.30ಕ್ಕೆ ತಲುಪಿದೆ. ಅಲ್ಲಿಂದ ಬೆಳಗಿನ 1.00 ಗಂಟೆಯ ವಿಮಾನದಲ್ಲಿ ದೆಹಲಿಗೆ ಹೋಗಬೇಕಿತ್ತು. ಭಿಕ್ಖು ಆನಂದ್ ಕೌಸಲ್ಯನ್ ಅವರೊಡನೆ ಕೆಲವು ಗಂಟೆಗಳನ್ನು ಕಳೆಯಲು ನಾನು ನಾಗಪುರಕ್ಕೆ ಬಂದಿದ್ದೆ. ಭಿಕ್ಖುಗಳ ನಿವಾಸ ಸ್ಥಾನದ ಮುಂದಿನ ಬಯಲಿನಲ್ಲಿ ಕೆಲವು ಕುರ್ಚಿಗಳನ್ನು ಹಾಕಿದೆವು. ಮತ್ತೊಬ್ಬ ಭಿಕ್ಖು, ಮೇದಾಂಕರ್ ಅವರೂ ನಮ್ಮ ಜೊತೆ ಸೇರಿದರು. ಅಲ್ಲಿ ಕುಳಿತುಕೊಳ್ಳುವ ಮೊದಲು ಆನಂದ್ ಅವರು ಭಿಕ್ಖುಗಳ ನಿವಾಸ ಸ್ಥಾನವನ್ನು ತೋರಿಸಿದರು. ನಂತರ ಅವರು ನನ್ನನ್ನು ದೀಕ್ಷಾ–ಭೂಮಿಗೆ ಕರೆದುಕೊಂಡು ಹೋದರು. (ಇದೊಂದು ವಿಶಾಲವಾದ ಬಯಲು. ಇಲ್ಲಿ ದೀಕ್ಷಾ ಕಾರ್ಯಕ್ರಮ ನಡೆಸುತ್ತಿದ್ದರು). ಅಲ್ಲಿ ಡಾ. ಅಂಬೇಡ್ಕರ್ ಅವರ ಒಂದು ಪ್ರತಿಮೆಯಿತ್ತು. ಹತ್ತಿರದಲ್ಲಿಯೇ ಅರಳಿಮರದ ಒಂದು ಕೊಂಬೆಯನ್ನು ನೆಡಲಾಗಿತ್ತು. ಈಗ ಅದು ಚೆನ್ನಾಗಿ ಬೇರುಬಿಟ್ಟುಕೊಂಡು ಒಂದು ಸಣ್ಣ ಮರವಾಗಿದೆ. ಇದರಿಂದಲೇ ಒಂದು ಸಸಿಯನ್ನು ಭಾರತದಿಂದ ಶ್ರೀಲಂಕಾಕ್ಕೆ ತೆಗೆದುಕೊಂಡು ಹೋಗಿದ್ದು. ಇಲ್ಲಿಂದ ಮುಂದಕ್ಕೆ ಪಗೋಡ ನಿರ್ಮಿಸಲು ಜಾಗವನ್ನು ಗುರುತಿಸಲಾಗಿತ್ತು. ಅದರ ಬುನಾದಿ ಕೆಲಸ ನಡೆಯುತ್ತಿತ್ತು. ಎಲ್ಲಾ ನೋಡಿದ ಮೇಲೆ, ನಾವು ಭಿಕ್ಖುಗಳ ನಿವಾಸದ ಎದುರು ಹಾಕಿದ್ದ ಕುರ್ಚಿಗಳಲ್ಲಿ ಕುಳಿತೆವು. ಭಂತೇ ಆನಂದ್ ಅವರು ನೆಗಡಿಯಿಂದ ಬಳಲುತ್ತಿದ್ದರೂ ನನ್ನ ಜೊತೆ ಬಹಳ ಹೊತ್ತು ಕುಳಿತರು.

ಆನಂದ್ ಅವರು ಧ್ಯಾನ ಮಾರ್ಗವನ್ನು ಎಷ್ಟೊಂದು ವಿರೋಧಿಸುತ್ತಾರೆ ಎಂಬುದು ನಿಮಗೆ ಈಗಾಗಲೇ ತಿಳಿದಿದೆ. ತಿಪಿಟಕ ಮತ್ತು ಇತರ ಪ್ರಮುಖ ಗ್ರಂಥಗಳನ್ನು ಅನುವಾದ ಮಾಡಿದ ಮೇಲೂ, ಬುದ್ಧರ ಧ್ಯಾನ ಮಾರ್ಗದ ಬಗ್ಗೆ ಕಿಂಚಿತ್ತೂ ಮನವರಿಕೆಯಾಗಿರಲಿಲ್ಲ. ಅವರಿಗೆ ಅದೆಲ್ಲಾ ನಿರುಪಯುಕ್ತ ಎಂದು ಕಾಣುತ್ತದೆ. ಬುದ್ಧರ ಬೋಧನೆಗಳಿಂದ ನಾವು ಧ್ಯಾನವನ್ನು, ಅಂದರೆ, ಸಮಾಧಿ ಮತ್ತು ಪನ್ನಾವನ್ನು ತೆಗೆದರೆ, ನಮಗೆ ಉಳಿಯುವುದು ಶೀಲ ಮಾತ್ರ. ಇದು ಅವರ ಬೋಧನೆಯ ಕೇವಲ ಮೂರನೆಯ ಒಂದು ಭಾಗ ಮಾತ್ರ. ಮತ್ತು ಸಮಾಧಿ(ಅಂದರೆ ಮನಸ್ಸಿನ ಮೇಲೆ ನಿಯಂತ್ರಣ) ಇಲ್ಲದೆ ಶೀಲ ಪಾಲನೆ ಮಾಡುವುದು ಹೇಗೆ? ಆದರೆ ಅವರ ದೃಷ್ಟಿಯಲ್ಲಿ ಸಮಾಧಿ ಮತ್ತು ಪನ್ನಾಕ್ಕೆ ಮಹತ್ವವಿಲ್ಲ. ಅದನ್ನು ಅವರು ಪ್ರಾಯೋಗಿಕವಾದದ್ದು ಅಥವಾ ತಕ್ಷಣ ಫಲಕೊಡುವಂಥದ್ದು ಎಂದು ಪರಿಗಣಿಸುವುದಿಲ್ಲ. ಅವರಿಗೆ ಇದೆಲ್ಲಾ ಕೇವಲ ಖಾಲಿ ಮಾತುಗಳು, ಸತ್ತ ಮೇಲೆ ಫಲಕೊಡುವಂತಹವು. ರಾಹುಲ ಸಾಂಕೃತ್ಯಾಯನ ಅವರಂತೆ ಪುನರ್ಜನ್ಮದ ಬಗ್ಗೆ ಕಿಂಚಿತ್ತೂ ನಂಬಿಕೆಯಿಲ್ಲ. ಏಕೆಂದರೆ ಇಬ್ಬರ ಮೇಲೂ ಕಾರ್ಲ್‌ಮಾರ್ಕ್ಸ್ ಅವರ ಪ್ರಭಾವ ಬಲವಾಗಿತ್ತು. ಹಾಗಾಗಿ ಅವರುಗಳಿಗೆ ಧ್ಯಾನವು ಕೇವಲ ಸಮಯದ ಅಪವ್ಯಯವಾಗಿತ್ತು.

ನಾನು ಧ್ಯಾನದ ಪ್ರಾಯೋಗಿಕ ಅಂಶವನ್ನು ಮತ್ತು ಅದರಿಂದ ಈಗಲೇ ಮತ್ತು ಇಲ್ಲಿಯೇ ದೊರೆಯುವ ಪ್ರಯೋಜನಗಳ ಬಗ್ಗೆ ಹೇಳಿದೆ. ಧ್ಯಾನದ ನನ್ನ ಸ್ವಂತ ಅನುಭವಗಳ ಬಗ್ಗೆ ಮತ್ತು ನನ್ನ ಅನೇಕ ಸ್ನೇಹಿತರ ಅನುಭವಗಳ ಬಗ್ಗೆ ಹೇಳಿದೆ. ಎರಡು–ಮೂರು ಗಂಟೆಗಳ ಪ್ರತಿರೋಧದ ನಂತರ, ಸ್ವೀಕಾರದ ರೂಪದಲ್ಲಿ ಸ್ವಲ್ಪ ತಲೆಯಾಡಿಸಲು ಪ್ರಾರಂಭಿಸಿದರು. ನಾನು ಹೊರಡುವ ಸಮಯ ಬಂತು ಎಂದು ಹೇಳಿದೆ. ಅವರು ಟ್ಯಾಕ್ಸಿ ಕರೆಯುತ್ತೇನೆ, ನೀವು ಸರಿಯಾದ ಸಮಯಕ್ಕೆ ವಿಮಾನ ನಿಲ್ದಾಣ ತಲುಪಬಹುದು ಎಂದು ಹೇಳಿದರು. ಆದರೆ ಟ್ಯಾಕ್ಸಿ ಕರೆಯುವ ಮೊದಲು ನಾಗಪುರದಲ್ಲಿಯೂ ಒಂದು ಶಿಬಿರ ನಡೆಸಲು ಒತ್ತಾಯಿಸಿದರು. ನವೆಂಬರ್‌ವರೆಗೆ ಧ್ಯಾನ ಶಿಬಿರಗಳು ನಿಗದಿಯಾಗಿವೆ. ಅಲ್ಲಿಯವರೆಗೆ ಬಿಡುವಿಲ್ಲ ಎಂದು ಹೇಳಿದೆ. ಯಾವುದಾದರು ಸ್ಥಳದಲ್ಲಿ ಶಿಬಿರ ಕ್ಯಾನ್ಸಲ್ ಆದರೆ ನಾಗಪುರದಲ್ಲಿ ನಡೆಸಬಹುದು ಎಂದೆ. ಇದನ್ನು ಕೇಳಿದ ಮೇಲೆ ಅವರ ಒತ್ತಾಯ ಇನ್ನೂ ಹೆಚ್ಚಿತು.

ಟ್ಯಾಕ್ಸಿಯವನಿಗೆ ಕರೆ ಮಾಡಿದ ಮೇಲೆ, ಅವನು ಬರಲು 20 ನಿಮಿಷಗಳಾಯಿತು.ಈ ಸಮಯದಲ್ಲಿ ಅವರು ಒಂದು ಶಿಬಿರಕ್ಕಾಗಿ ನಿರಂತರವಾಗಿ ವಿನಂತಿಸಿದರು. ನನ್ನ ಹಣಕಾಸಿನ ಸ್ಥಿತಿಯನ್ನೂ ಅವರ ಬಳಿ ಹೇಳಿದೆ. ಇಲ್ಲಿ ಶಿಬಿರಕ್ಕೆ ಬರುವ ಜನರು ಬಹುತೇಕ ಬಡವರು. ಅವರು ಶಿಬಿರ ಸೇರುವುದೆಂದರೆ ಹತ್ತು ದಿನಗಳವರೆಗೆ ಅವರಿಗೆ ದುಡಿಮೆಯಿರುವುದಿಲ್ಲ ಮತ್ತು ಊಟ ಮುಂತಾದ ಶಿಬಿರದ ಖರ್ಚು ವೆಚ್ಚಗಳನ್ನು ಭರಿಸುವುದೂ ಕಷ್ಟ ಎಂದು ಹೇಳಿದೆ. ಬರ್ಮಾ ದೇಶವು ಯಾವುದೇ ಪರಿಹಾರ ಕೊಡದೆ ವ್ಯಾಪಾರ ಮತ್ತು ಉದ್ಯಮಗಳನ್ನು ರಾಷ್ಟ್ರೀಕರಣಗೊಳಿಸಿದ್ದರಿಂದ ನನ್ನಿಂದ ಯಾವುದೇ ರೀತಿಯ ಹಣಕಾಸಿನ ನೆರವನ್ನು ನಿರೀಕ್ಷಿಸಬಾರದು ಎಂದು ನೇರವಾಗಿ ಹೇಳಿದೆ. ಜೊತೆಗೆ ಇತರೆ ಧ್ಯಾನ ಸಾಧಕರಿಂದ ಈ ಶಿಬಿರಕ್ಕೆ ದಾನ ಕೇಳಲೂ ಕಷ್ಟವಾಗುತ್ತದೆ ಎಂದೆ.

ಪ್ರಪಂಚ ಜ್ಞಾನದ ಸಂಪೂರ್ಣ ಅರಿವಿದ್ದ, ಬುದ್ಧಿವಂತ ಭಿಕ್ಖು ತಕ್ಷಣವೇ ನೀವು ನಿಮ್ಮ ಸಮಯವನ್ನು ಮಾತ್ರ ಕೊಡಿ. ಖರ್ಚು ವೆಚ್ಚದ ಬಗ್ಗೆ ಚಿಂತಿಸಬೇಡಿ; ಹಣಕಾಸಿನ ವ್ಯವಸ್ಥೆಯನ್ನು ನಾನು ಮಾಡುತ್ತೇನೆ ಎಂದು ಹೇಳಿದರು. ಈ ವಿಷಯದ ಬಗ್ಗೆ ಸ್ವಲ್ಪ ಸಮಯ ನಡೆದ ಚರ್ಚೆಯು ಹೃದಯಸ್ಪರ್ಶಿಯಾಗಿತ್ತು. ಈ ಕಮ್ಯುನಿಸ್ಟ್ ಭಿಕ್ಖುವಿನ ಹೃದಯವನ್ನೂ ಕಲಕಿತು. ಆ ಸಮಯದಲ್ಲಿನ ಅವರ ಸೌಜನ್ಯ ಮತ್ತು ಪ್ರೀತಿಯನ್ನು ನಾನು ಎಂದಿಗೂ ಮರೆಯುವುದಿಲ್ಲ. ಅಶ್ವಘೋಶ ಅವರು ಬುದ್ಧರ ಗುಣಗಾನದ ಬಗ್ಗೆ ಬರೆದ ಒಂದು ಸಂಸ್ಕೃತ ಶ್ಲೋಕವನ್ನು ಅವರು ವಿವರಿಸಿದರು. ಅವರು ಹೇಳಿದ ಪದಗಳು ಯಥಾವತ್ತಾಗಿ ನನಗೆ ನೆನಪಿಲ್ಲ, ಆದರೆ ಅವುಗಳ ಅರ್ಥ ನನ್ನ ಕಿವಿಯಲ್ಲಿ ಇನ್ನೂ ರಿಂಗಣಿಸುತ್ತಿದೆ. ಸಿದ್ಧಾರ್ಥ ಮನೆ ಬಿಟ್ಟು ಹೋದಾಗ ದುಃಖಿಸುತ್ತಾ ಯಶೋಧರಾ ಹೇಳಿದ ಮಾತುಗಳು, ತನ್ನ ಜೀವನ ಪರ್ಯಂತ ಯಾವಾಗಲೂ ದಾನ ಕೊಡುತ್ತಿದ್ದ ವ್ಯಕ್ತಿಯು ಈಗ ಅನ್ನಕ್ಕಾಗಿ ಹೇಗೆ ಬೇಡುತ್ತಾರೆ?

ಭಿಕ್ಖು ಆನಂದ್ ಅವರಿಂದ ಬೀಳ್ಕೊಂಡು ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವಾಗ, ನನ್ನ ಹೃದಯ ಹಗುರವಾದಂತೆನಿಸಿ ಸಂತೋಷವಾಯಿತು. ನನ್ನಲ್ಲಿ ಇನ್ನೂ ಉಳಿದಿದ್ದ ಶ್ರೀಮಂತಿಕೆಯ ಪೊಳ್ಳು ಅಹಂಕಾರವು ಈಗ ಕರುಣೆಯಾಗಿ ಕರುಗುತ್ತಿತ್ತು. ನನ್ನ ಮನಸ್ಸು ಈಗ ಬಹಳ ಶುದ್ಧವಾಗಿ ಸ್ಪಷ್ಟವಾಗಿತ್ತು. ನನ್ನ ಮನಸ್ಸು ಧಮ್ಮ ಹರಡುವ ಏಕೈಕ ಆಲೋಚನೆಯಿಂದ ತುಂಬಿತ್ತು. ನಾನು ಧಮ್ಮ ಆಚಾರ್ಯರ ಪಾತ್ರವನ್ನು ಮಾತ್ರ ಈಗ ಮಾಡಬೇಕಾಗಿದೆ. ಶ್ರೀಮಂತ ವ್ಯಕ್ತಿ ಮತ್ತು ದೊಡ್ಡ ದಾನಿ ಈ ಗುರುತುಗಳನ್ನು ಗತಿಸಿಹೋದಂತಹವುಗಳು ಎಂದು ಮರೆಯಬೇಕು. "ಸಬ್ಬದಾನಮ್ ಧಮ್ಮದಾನಮ್ ಜಿನಾತಿ" (ದಾನಗಳಲ್ಲೆಲ್ಲಾ ಧಮ್ಮ ದಾನವೇ ಶ್ರೇಷ್ಠವಾದದ್ದು) ಎಂಬ ಬುದ್ಧರ ಮಾತುಗಳು ನನ್ನ ಮನಸ್ಸಿನಲ್ಲಿ ಪ್ರತಿಧ್ವನಿಸಿದವು. ಹೌದು, ನಿಜವಾಗಿಯೂ ಎಲ್ಲಾ ದಾನಗಳಲ್ಲಿ ಧಮ್ಮ ದಾನವೇ ಅತ್ಯುನ್ನತವಾದುದು.

ನನ್ನ ಜೀವನದಲ್ಲಿ ನಾನು ಮಾಡಿದ ಎಲ್ಲಾ ದಾನಗಳು, ವ್ಯಕ್ತಿಯು ಪೂರ್ಣತೆ ಪಡೆಯುವ ಈ ಧಮ್ಮ ದಾನಕ್ಕೆ ಹೋಲಿಸಿದರೆ ಗೌಣವಾದವುಗಳು. ಆದ್ದರಿಂದ, ಈ ಧಮ್ಮ ದಾನದಿಂದ ನಾನು ನನ್ನ ಮನಸ್ಸನ್ನು ಸಂತೃಪ್ತಗೊಳಿಸಬೇಕು. ಹಣಕಾಸಿನ ನೆರವು ನೀಡಲು ಶಕ್ತನಾಗದಿರುವ ಬಗ್ಗೆ ನಾನು ಚಿಂತಿಸಬಾರದು. ಪರಿಸ್ಥಿತಿಗಳು ಬದಲಾದಾಗ ಹಣದ ದಾನವೂ ತನ್ನಷ್ಟಕ್ಕೆ ತಾನೇ ಪ್ರಾರಂಭವಾಗುತ್ತದೆ. ಸದ್ಯಕ್ಕೆ ನನ್ನ ಎಲ್ಲಾ ಶಕ್ತಿಯನ್ನು ಧಮ್ಮ ದಾನಕ್ಕೆ ವಿನಿಯೋಗಿಸಬೇಕು. ನಮ್ಮ ಹಿರಿಯಣ್ಣ ನನ್ನ ವಿಮಾನ ಪ್ರಯಾಣಕ್ಕೆ, ವೈಯಕ್ತಿಕ ಖರ್ಚುಗಳಿಗೆ, ಜೊತೆಗೆ ಊರಿಂದ ಊರಿಗೆ ಹೋದಾಗ ಒಳ್ಳೆಯ ಹೊಟೇಲ್‌ನಲ್ಲಿ ತಂಗಲು ಹಣ ನೀಡುತ್ತಿದ್ದಾರೆ. ಕೆಲವು ದೈಹಿಕ ಅನಾನುಕೂಲಗಳನ್ನು ಸಹಿಸಿಕೊಂಡು ಇದರಲ್ಲಿ ಸ್ವಲ್ಪ ಹಣವನ್ನು ಉಳಿಸಿಕೊಂಡು ಬಡ ಧ್ಯಾನ ಸಾಧಕರಿಗೆ ಉಪಯೋಗಿಸುತ್ತೇನೆ.

ಈ ಪ್ರಾಮಾಣಿಕ ತೀರ್ಮಾನದೊಂದಿಗೆ ನಾಗಪುರದಿಂದ ಹೊರಟು ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿದೆ. ಅಲ್ಲಿ ನಮ್ಮ ಕಚೇರಿ ಪ್ರತಿನಿಧಿಯಾದ ಗೋಸ್ವಾಮಿ ಮತ್ತು ಧರ್ಮ ಸಹೋದರರಾದ ಶ್ರೀ ಧಮ್ಮವೀರ್ ಮತ್ತು ಖುಷಿರಾಜ್ ವರ್ಮ ನನ್ನನ್ನು ಸ್ವಾಗತಿಸಿದರು.

ಒಂದು ಹಗಲು ಮತ್ತು ಒಂದು ರಾತ್ರಿ ನಾನು ಖುಷಿರಾಜ್ ಅವರ ಮನೆಯಲ್ಲಿ ಉಳಿದುಕೊಂಡೆ. ಎರಡನೆಯ ರಾತ್ರಿ ನಾನು ಚುರುಗೆ ಹೋಗಬೇಕಾಗಿತ್ತು. ಅಲ್ಲಿದ್ದಾಗ ಅವರ ಮನೆಯ ಸ್ವಚ್ಛತೆ ಮತ್ತು ಹೊರಗಿನ ಸೌಂದರ್ಯ ನೋಡಿ ನನಗೆ ಸಂತೋಷಕರ ಆಶ್ಚರ್ಯವಾಯಿತು. ಮನೆಯೊಳಗಿನ ವಾತಾವರಣವೂ ಬಹಳ ಪರಿಶುದ್ಧವಾಗಿದ್ದು ಧ್ಯಾನಕ್ಕೆ ಪೂರಕವಾಗಿತ್ತು. ಆದರೆ ಬರ್ಮಾದ ಕೆಲವು ವಲಸಿಗರ ಪರಿಸ್ಥಿತಿಯ ಬಗ್ಗೆ ಕೇಳಿ ಖೇದವಾಯಿತು. ಇದಕ್ಕಿಂತ ಮೊದಲು ಮತ್ತು ಇದರ ನಂತರವೂ ನಾನು ಬರ್ಮಾದ ಅನೇಕ ವಲಸಿಗರನ್ನು ಭೇಟಿ ಮಾಡಿ ಅವರ ನೋವಿನ ಕಥೆಗಳನ್ನು ಪದೇ ಪದೇ ಕೇಳುತ್ತಿದ್ದೇನೆ. ಬರ್ಮಾದಲ್ಲಿ ಬರ್ಮೀಯರ ಪ್ರಾಮಾಣಿಕ ಸ್ವಭಾವವನ್ನು ಮೈಗೂಡಿಸಿಕೊಳ್ಳಲು ಭಾರತದಿಂದ ಬಂದ ಭಾರತೀಯರಿಗೆ ಸುಲಭ. ಅವರಿಗೆ ಹೋಲಿಸಿದರೆ ಹೇಗೆ ಭಾರತೀಯ ಸಮಾಜವು ಅಪ್ರಾಮಾಣಿಕವಾಗಿದೆ? ಮೋಸ, ವಂಚನೆ, ಕಪಟ, ಕೃತ್ರಿಮದ, ಅಪ್ರಾಮಾಣಿಕ ಜನರು ಎಷ್ಟೊಂದು ಸಂಖ್ಯೆಯಲ್ಲಿದ್ದಾರೆ? ಇದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಒಂದು ಕಡೆ ನಮ್ಮನ್ನು ನಾವು ವಿಶ್ವಗುರು ಮತ್ತು ಧರ್ಮಗುರು ಎಂದು ಪರಿಗಣಿಸುತ್ತೇವೆ. ನಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಹೆಮ್ಮೆಯಿಂದ ಹೊಗಳಿಕೊಳ್ಳುತ್ತೇವೆ. ನಮ್ಮನ್ನು ನಾವು ಶ್ರೇಷ್ಠರು, ಪ್ರಾಮಾಣಿಕರು,ಉನ್ನತ ಸ್ಥಾನದಲ್ಲಿರುವವರು ಎಂದು ಕರೆದುಕೊಂಡು ಬರ್ಮೀಯರನ್ನು ಕೀಳಾಗಿ ನೋಡುತ್ತೇವೆ. ಆದರೆ ನಮ್ಮ ನಡತೆ ಎಷ್ಟೊಂದು ಅಧೋಗತಿಗಿಳಿದಿದೆ, ನಮ್ಮ ನೈತಿಕತೆ ಎಷ್ಟೊಂದು ಕೆಳಮಟ್ಟದಲ್ಲಿದೆ ಎಂಬುದು ನನ್ನ ಮನಸ್ಸನ್ನು ನಿರಂತರವಾಗಿ ಕಾಡುತ್ತಿತ್ತು.

ಆದರೆ ಭಾರತಕ್ಕೆ ಬಂದು ಜನರ ಪರಿಸ್ಥಿತಿಯನ್ನು ನೋಡಿದಾಗ ಬರ್ಮಾದಲ್ಲಿರುವ ಭಾರತೀಯರ ನೈತಿಕ ಮಟ್ಟ ಬಹಳ ಎತ್ತರದಲ್ಲಿದೆ ಎನಿಸಿತು. ಇಲ್ಲಿ ಎಲ್ಲವನ್ನೂ ಹಣದಿಂದ ಅಳೆಯಲಾಗುತ್ತದೆ. ಸಹೋದರರು ತಂದೆ ಮಕ್ಕಳ, ಮತ್ತು ಸಮುದಾಯದ ಮಧ್ಯದ ಎಲ್ಲಾ ಸಂಬಂಧಗಳನ್ನು ಹಣದಿಂದಲೇ ಅಳೆಯಲಾಗುತ್ತದೆ, ತಮ್ಮನ್ನು ತಾವು ಧಾರ್ಮಿಕರು ಎಂದು ಪರಿಗಣಿಸಿಕೊಂಡವರು ತೋರ್ಕೆಯ ಧಾರ್ಮಿಕ ಆಚರಣೆಗಳಲ್ಲಿ ಆಳವಾಗಿ ಮುಳುಗಿದ್ದಾರೆ.

ತಮ್ಮನ್ನು ತಾವು ಧಾರ್ಮಿಕ ಮುಖಂಡರು ಎಂದು ಕರೆದುಕೊಳ್ಳುವ ಕೆಲವರು ಅಧಾರ್ಮಿಕ ಮಾರ್ಗದಿಂದ ಪ್ರಾಪಂಚಿಕ ಅಧಿಕಾರವನ್ನು ಗಳಿಸಿಕೊಳ್ಳಲೂ ಕಾತುರರಾಗಿದ್ದಾರೆ. ರಾಜಕೀಯ ಅಧಿಕಾರದಿಂದ ಇಡೀ ದೇಶವನ್ನೇ ಆಧ್ಯಾತ್ಮಿಕವಾಗಿ ಮೇಲೆತ್ತಬಹುದೆಂಬ ಅಹಂಕಾರ. ಧಾರ್ಮಿಕ ಮುಖಂಡರು ಮತ್ತು ಧಾರ್ಮಿಕ ಸಂಸ್ಥೆಗಳು ಇಂತಹ ಪರಿಸ್ಥಿತಿಯಲ್ಲಿರುವಾಗ, ನಾವು ಇತರರನ್ನು ದೂಷಿಸುವುದು ಹೇಗೆ? ಪ್ರತಿಯೊಬ್ಬರೂ ದುಶ್ಕೃತ್ಯಗಳಲ್ಲಿ ಮುಳುಗಿರುವಾಗ, ಈ ಸ್ಥಿತಿಯಿಂದ ಹೊರಬರಬೇಕೆಂಬ ಪ್ರಯತ್ನ ಯಾರಿಂದಲೂ ನಡೆಯುತ್ತಿಲ್ಲ. ಇಡೀ ದೇಶದ ನೈತಿಕ ರಚನೆ ಬದಲಾಗುವವರೆಗೆ ಯಾರೂ, ಕೆಲವೇ ಕೆಲವು ಪ್ರಾಮಾಣಿಕ ಜನರಾಗಲಿ ಅಥವಾ ನೀತಿ ನಿಷ್ಠೆಗಳಿಲ್ಲದ ಬಹುಸಂಖ್ಯೆಯ ಜನರಾಗಲಿ, ನಿರಾಳವಾಗಿರಲು ಸಾಧ್ಯವಿಲ್ಲ. ಆದರೆ ಈ ಅನೈತಿಕ ರಚನೆ ಹೇಗೆ ಬದಲಾಗುತ್ತದೆ? ಯಾರು ಇದನ್ನು ಬದಲಾಯಿಸುತ್ತಾರೆ? ಈ ಸಮಸ್ಯೆಯು ಬರ್ಮೀಯ ವಲಸಿಗರನ್ನು ಮಾತ್ರವಲ್ಲ, ಇಡೀ ದೇಶವಾಸಿಗಳನ್ನೂ ತೊಂದರೆಗೀಡು ಮಾಡುತ್ತದೆ.

ನನ್ನ ಎರಡು ದಿನದ ದೆಹಲಿ ವಾಸ್ತವ್ಯದಲ್ಲಿ, ಬರ್ಮಾಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಕೆಲವು ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಿದೆ. ಬರ್ಮಾದಲ್ಲಿ ಹಿಂದಿ ಪ್ರಚಾರದ ಬಗ್ಗೆ ಮತ್ತು ಹಿಂದಿ ಪುಸ್ತಕಗಳ ಕೊರತೆಯ ಬಗ್ಗೆಯೂ ಚರ್ಚಿಸಲಾಯಿತು. ನನ್ನ ಹಳೆಯ ಸ್ನೇಹಿತರುಗಳಲ್ಲಿ ಶ್ರೀ ರಾಮ್ಧಾರಿ ಸಿಂಗ್ ದಿನ್ಕರ್ ಅವರನ್ನು ಭೇಟಿ ಮಾಡಿದೆ. ಅವರು ಬಹಳ ಸಹಾನುಭೂತಿ ತೋರಿಸಿದರು. ಬರ್ಮಾದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಬಹಳ ಆತ್ಮೀಯವಾಗಿ ವಿಚಾರಿಸಿದರು. ಅವರ ತರಹವೇ ಅನೇಕರು ಬರ್ಮಾ ಸರ್ಕಾರದ ರಾಷ್ಟ್ರೀಕರಣ ನೀತಿಯು ಭಾರತೀಯರಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಅನಿವಾಸಿ ಭಾರತೀಯರೇ ಸರ್ಕಾರದ ಈ ಸಾಮಾಜಿಕ ನೀತಿಯ ಬಲಿಪಶುಗಳು. ಆದ್ದರಿಂದ ಭಾರತೀಯರು ಅಲ್ಲಿಂದ ಓಡಿ ಹೋಗುತ್ತಿದ್ದಾರೆ ಎಂಬ ತಪ್ಪು ಭಾವನೆ ಹೊಂದಿದ್ದರು. ನಿಜ ಸ್ಥಿತಿಯ ಬಗ್ಗೆ ತಿಳಿಸಿ ನಾನು ಅವರ ಮತ್ತು ಇತರೆ ಅನೇಕರ ತಪ್ಪು ತಿಳುವಳಿಕೆಗಳನ್ನು ನಿವಾರಿಸಿದೆ.

ಬಿಕನೇರ್‌ನ ಮಹಾರಾಜರೂ ಮತ್ತು ನನ್ನ ಹಳೆಯ ಸ್ನೇಹಿತರೂ ಆದ ಡಾ॥ ಕರಣ್‌ಸಿಂಗ್ ಅವರನ್ನೂ ನಾನು ಭೇಟಿ ಮಾಡಿದೆ. ಬರ್ಮಾದ ವಲಸಿಗರಿಗೆ ಸಹಾಯ ಮಾಡಲು ಅವರು ಉತ್ಸಾಹ ತೋರಿದರು. ಈ ವಿಷಯದಲ್ಲಿ ಅವರು ಹೆಚ್ಚು ಸಹಾಯ ಮಾಡಲು ಆಗದಿದ್ದರೂ, ಕೇಂದ್ರ ಸರ್ಕಾರದ ಕೆಲವು ಮಂತ್ರಿಗಳಿಗೆ ನನ್ನನ್ನು ಪರಿಚಯಿಸಿದರು. ಇದಕ್ಕಾಗಿ ನಾನು ಅವರಿಗೆ ಚಿರಋಣಿಯಾಗಿದ್ದೇನೆ.

ಇಂತಿ ನಿಮ್ಮ ಚಿಕ್ಕ ತಮ್ಮ ಸತ್ಯನಾರಾಯಣ

*****

## ಗೋಯಂಕಾಜಿಯವರೊಡನೆ ಪ್ರಶ್ನೋತ್ತರಗಳು

**('ಫಾರ್ ದ ಬೆನಿಫಿಟ್ ಆಫ್ ಮೆನಿ' ಇಂಗ್ಲಿಷ್ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ)**

**ಪ್ರಶ್ನೆ:** ಧ್ಯಾನ ಮಂದಿರದಲ್ಲಿ (ಧಮ್ಮಹಾಲ್) ಆಚಾರ್ಯರು ಕೂರುವ ಆಸನವು ವಿದ್ಯಾರ್ಥಿಗಳು ಕೂರುವ ಆಸನಕ್ಕಿಂತ ಏಕೆ ಎತ್ತರದಲ್ಲಿರುತ್ತದೆ?

**ಗೋಯಂಕಾಜಿ:** ಧ್ಯಾನ ಕೇಂದ್ರಕ್ಕಾಗಿ ರೂಪಿಸಿರುವ ಎಲ್ಲಾ ನಿಯಮಗಳೂ ಒಂದೇ ಉದ್ದೇಶವನ್ನು ಹೊಂದಿವೆ. ವಿಪಶ್ಯನ ಧ್ಯಾನ ಕಲಿಯಲು ಬರುವವರು ಧ್ಯಾನ ಕೇಂದ್ರದಿಂದ ಹೆಚ್ಚಿನ ಪ್ರಯೋಜನ ಪಡೆಯಬೇಕು. ನಿಯಮಗಳಿಗೆ ಮತ್ಯಾವುದೇ ಕಾರಣವಿಲ್ಲ. ಆಚಾರ್ಯರ ಅಹಂ ಹೆಚ್ಚಿಸಲು ಆಚಾರ್ಯರ ಪೀಠವನ್ನು (ಧಮ್ಮ ಸೀಟ್) ಎತ್ತರ ಮಾಡಿಲ್ಲ. ಇಲ್ಲ.

ಲೌಕಿಕವಾದ ಒಂದು ಕಾರಣವೆಂದರೆ, ಆಚಾರ್ಯರು ವಿದ್ಯಾರ್ಥಿಗಳಿಗಿಂತ ಸ್ವಲ್ಪ ಎತ್ತರದಲ್ಲಿ ಕೂರದಿದ್ದರೆ, ಅವರು ವಿದ್ಯಾರ್ಥಿಗಳನ್ನು ಮತ್ತು ವಿದ್ಯಾರ್ಥಿಗಳು ಆಚಾರ್ಯರನ್ನು ನೋಡಲು ಕಷ್ಟವಾಗುತ್ತದೆ. ಆದರೆ ಇದೊಂದೇ ಕಾರಣವಲ್ಲ. ಇನ್ನೊಂದು ಕಾರಣವೆಂದರೆ ಆಚಾರ್ಯರು ಯಾಂತ್ರಿಕವಾಗಿ ಬೋಧನೆ ಮಾಡುವುದಿಲ್ಲ. ಅವರು ಪ್ರೀತಿ ಮತ್ತು ಕರುಣೆಯ ತರಂಗಗಳನ್ನು ಉತ್ಪತ್ತಿ ಮಾಡುತ್ತಾರೆ. ತರಂಗಗಳು ಯಾವಾಗಲೂ ಮೇಲ್ಮಟ್ಟದಿಂದ ಕೆಳಮಟ್ಟಕ್ಕೆ ಪ್ರವಹಿಸುತ್ತವೆ. ಆದ್ದರಿಂದ ಆಚಾರ್ಯರಿಗಿಂತ ಸ್ವಲ್ಪ ಕೆಳಗೆ ಕುಳಿತಿರುವ ವಿದ್ಯಾರ್ಥಿಗಳು ಆಚಾರ್ಯರ 'ಮೆತ್ತಾ' (ಪ್ರೀತಿ ಮತ್ತು ಕರುಣೆಯ) ತರಂಗಗಳಿಂದ ಪ್ರಯೋಜನ ಪಡೆಯುತ್ತಾರೆ. ಹತ್ತು ದಿನಗಳ ಕಾಲ ಜೀವನದ ಎಲ್ಲಾ ಜವಾಬ್ದಾರಿಗಳನ್ನು ಬದಿಗಿಟ್ಟು ಶಿಬಿರಕ್ಕೆ ಬರುವ ವ್ಯಕ್ತಿಯು, ಧ್ಯಾನ ಕೇಂದ್ರದಲ್ಲಿನ ತನ್ನ ವಾಸ್ತವ್ಯದಿಂದ ಗರಿಷ್ಠ ಲಾಭ ಪಡೆಯಬೇಕು.

**ಪ್ರಶ್ನೆ:** ಧ್ಯಾನ ಕೇಂದ್ರದಲ್ಲಿ ಹೂವು ಮತ್ತು ಹಣ್ಣಿನ ಗಿಡಮರಗಳು ಇರಬಹುದೇ?

**ಗೋಯಂಕಾಜಿ:** ನೀವು ಧ್ಯಾನ ಕೇಂದ್ರದಲ್ಲಿ ಮರ ಬೆಳೆಸುವ ಬಗ್ಗೆ ಮಾತಾಡಿದಾಗ, ಎಲ್ಲವೂ ಹಸಿರಾಗಿ ಹೂವು ಮತ್ತು ಹಣ್ಣುಗಳಿಂದ ಕಂಗೊಳಿಸಬೇಕು. ಇದರಲ್ಲಿ ತಪ್ಪಿಲ್ಲ. ಇಲ್ಲಿ ಹೂವು ಹಣ್ಣುಗಳಿವೆ. ಅವು ಯಾರಿಗೂ ತೊಂದರೆ ಮಾಡುವುದಿಲ್ಲ. ಹೂವು ಮತ್ತು ಹಣ್ಣುಗಳು ಇರಲಿ.

**ಪ್ರಶ್ನೆ :** "ಪ್ರಯತ್ನವಿಲ್ಲದೇ ಗಮನಿಸುವ" ಅಭ್ಯಾಸ ಮಾಡಬೇಕು ಎಂದು ನೀವು ಹೇಳುತ್ತೀರಿ. ನಂತರ ನಾವು ನಮ್ಮ ಮನಸ್ಸುಗಳನ್ನು ನಿಯಂತ್ರಿಸಬೇಕು ಎಂದು ಹೇಳುತ್ತೀರಿ. ದಯವಿಟ್ಟು ಸ್ಪಷ್ಟನೆ ನೀಡುವಿರಾ?

**ಗೋಯಂಕಾಜಿ:** "ಪ್ರಯತ್ನವಿಲ್ಲದ ಗಮನಿಸುವಿಕೆ" ಎಂದರೆ, ನಿಮಗೆ ಇಷ್ಟವಾದ ಸಂವೇದನೆಯನ್ನು ಸೃಷ್ಟಿಸಲು ಅಥವಾ ನಿಮಗೆ ಇಷ್ಟವಿಲ್ಲದ ಯಾವುದೇ ಸಂವೇದನೆಯನ್ನು ತೊಲಗಿಸಲು ನೀವು ಯಾವುದೇ ಪ್ರಯತ್ನ ಮಾಡಬಾರದು. ಅದು ಪ್ರಯತ್ನವಿಲ್ಲದ್ದು ಏಕೆಂದರೆ ವಸ್ತುಸ್ಥಿತಿಗಳು ನಡೆಯುತ್ತಿವೆ ಮತ್ತು ಅವುಗಳನ್ನು ಬದಲಾಯಿಸಲು ನೀವು ಯಾವುದೇ ಪ್ರಯತ್ನ ಮಾಡುವುದಿಲ್ಲ. ನೀವು ಸಂವೇದನೆಗಳ ಮೇಲೆ ಪ್ರಭುತ್ವ ಹೊಂದಿಲ್ಲ. ಅಲ್ಲಿ ಪ್ರಕೃತಿಯ ನಿಯಮ ಕೆಲಸ ಮಾಡುತ್ತದೆ. ಕೇವಲ ಗಮನಿಸಿ, ಮತ್ತೇನನ್ನೂ ಮಾಡಬೇಡಿ. ಆದರೆ ಗಮನಿಸಲು ಪ್ರಯತ್ನ ಮಾಡಬೇಕು. ಸಂವೇದನೆಗಳನ್ನು ಗಮನಿಸಲು ನೀವು ಪ್ರಯತ್ನ ಮಾಡದಿದ್ದರೆ, ಮನಸ್ಸು ಅಲ್ಲಿ ಇಲ್ಲಿ ಅಲೆದಾಡುತ್ತದೆ. ಆಗ ನೀವು "ಓಹ್, ಇದು ಪ್ರಯತ್ನವಿಲ್ಲದ್ದು" ಎಂದು ನೀವು ಯೋಚಿಸುತ್ತೀರಿ. ಆದರೆ ಅದರಿಂದ ನೀವು ಏನನ್ನು ಗಳಿಸುತ್ತೀರಿ? ಆದ್ದರಿಂದ ಅರಿವಿನಿಂದ ಮತ್ತು ಗಮನದಿಂದ ಇರುವುದು ಧ್ಯಾನದ ಬಹಳ ಮುಖ್ಯವಾದ ಭಾಗ. ಆದರೆ ಒಂದು ನಿರ್ದಿಷ್ಟ ಸಂವೇದನೆಯನ್ನು ಸೃಷ್ಟಿಸಲು ಪ್ರಯತ್ನಿಸುವುದು ತಪ್ಪು.

**ಪ್ರಶ್ನೆ:** 'ಅತ್ತಾ ಹಿ ಅತ್ತನೋ ನಾಥೋ' – ಅಂದರೆ ನೀನೇ ನಿನ್ನ

RNI. No. : KARKAN/2015/68727. Postal Regn. No.: RNP/KA/BGS/2253/2023-25
Published On 10th & Posted On 20th of December Posted At : Bengaluru PSO, B'luru 26. Price(Annual)Rs.30.

ಒಡೆಯ ಎಂದು ಬೋಧಿಸುತ್ತೀರಿ. ಹಾಗಾದರೆ ಯಾವುದೇ ಬಾಹ್ಯಶಕ್ತಿ, ಅಥವಾ ಮಾರ ನಮ್ಮ ಮೇಲೆ, ನಮ್ಮ ಮನಸ್ಸುಗಳ ಮೇಲೆ ಅಥವಾ ನಮ್ಮ ಧಮ್ಮದ ಅನ್ವೇಷಣೆಯ ಮೇಲೆ ಪರಿಣಾಮ ಬೀರಲು ಸಾಧ್ಯ?

**ಗೋಯಂಕಾಜಿ:** ಮಾರ ಬಾಹ್ಯಶಕ್ತಿ ಅಲ್ಲ, ಅದು ನಮ್ಮೊಳಗೇ ಇದೆ. ಮಾರ ಎಂದರೆ ನಿಮ್ಮ ಮನಸ್ಸಿನ ಮಲಿನತೆಗಳು, ಮಲಿನತೆಗಳನ್ನು ಉತ್ಪತ್ತಿ ಮಾಡುವ ನಿಮ್ಮ ಮನಸ್ಸಿನ ಅಭ್ಯಾಸ, ಈ ಅಥವಾ ಆ ಇಂದ್ರಿಯ ಸುಖದ ಬಗೆಗಿನ ಆಲೋಚನೆ. ಈಗ ನೀವು 'ಅತ್ತಾ ಹಿ ಅತ್ತನೋ ನಾಥೋ' ಅನ್ನು ಬೆಳೆಸಿಕೊಳ್ಳಬೇಕು, ನಿಮ್ಮ ಮನಸ್ಸಿನ ಮೇಲೆ ಪ್ರಭುತ್ವ ಬೆಳೆಸಿಕೊಳ್ಳಬೇಕು. ಆಗ ನೀವು ಧಮ್ಮದ ಮಾರ್ಗವನ್ನು ಬಿಟ್ಟು ನಿಮಗೆ ನೀವೇ ಹಾನಿ ಮಾಡಿಕೊಳ್ಳುವಂತಹ ಆಟವನ್ನು ಮಾರನು ಆಡುವುದಿಲ್ಲ. ಮತ್ತೊಮ್ಮೆ ಹೇಳುವುದೇನೆಂದರೆ, ನೀವೇ ನಿಮ್ಮ ಒಡೆಯರಾಗಿ,ಮಾರನು ಯಾವುದೇ ರೀತಿಯಿಂದಲೂ ನಿಮಗೆ ಹಾನಿ ಮಾಡಲು ಸಾಧ್ಯವಿಲ್ಲ. ನೀವು ನಿಜವಾಗಿಯೂ 'ಅತ್ತಾ ಹಿ ಅತ್ತನೋ ನಾಥೋ' ಆದರೆ, ಯಾವ ಮಾರನೂ ನಿಮಗೆ ಹಾನಿ ಮಾಡಲು ಸಾಧ್ಯವಿಲ್ಲ.

**ಪ್ರಶ್ನೆ:** ವಿಪಶ್ಯನದ ಅಭ್ಯಾಸ ಮಾಡುವಾಗ ದೈಹಿಕ ಸಂವೇದನೆಗಳ ಜೊತೆಗೆ ಇತರೆ ವಸ್ತುಸ್ಥಿತಿಗಳ ಬಗೆಗೂ ಗಮನಕೊಡಬೇಕಲ್ಲವೇ? ಉದಾಹರಣೆಗೆ, ನೋಡುವುದು, ಕೇಳುವುದು ಮುಂತಾದವು?

**ಗೋಯಂಕಾಜಿ:** ಹೌದು, ಆದರೆ ಈ ಹಂತದಲ್ಲಿ ಅಲ್ಲ. ಅದು ಆಮೇಲೆ ಬರುತ್ತದೆ. ಮೊದಲು ನೀವು ಶರೀರದ ಪ್ರತಿಯೊಂದು ಕಣದಲ್ಲೂ ಸಂವೇದನೆಗಳನ್ನು ಅರಿಯುವ ಹಂತವನ್ನು ತಲುಪಬೇಕು. ಒಮ್ಮೆ ನೀವು ಈ ಅರಿವಿನಲ್ಲಿ ಸ್ಥಿರಗೊಂಡಾಗ, ಶಬ್ದದಿಂದ ಉಂಟಾಗುವ ಸಂವೇದನೆಯನ್ನು ಅರಿಯುವುದು ಬಹಳ ಸುಲಭವಾಗುತ್ತದೆ. ನೀವು ಸಂವೇದನೆಗಳನ್ನು ಅರಿಯದೆ, ಶಬ್ದ ಬಂದಾಗ, "ಓಹ್, ಇದು ಶಬ್ದ, ಇದು ಶಬ್ದ' ಎಂದು ನಿಮಗೆ ನೀವೇ ಹೇಳಿಕೊಂಡರೆ, ಅದು ನಿಮಗೆ ಸಹಾಯ ಮಾಡುವುದಿಲ್ಲ. ಏಕೆಂದರೆ ಇದು ಮೇಲು ಮೇಲಿನ ಸತ್ಯ ಶಬ್ದವೂ ಒಂದು ತರಂಗ; ಬೆಳಕು, ಬಣ್ಣ, ಆಕಾರಗಳೂ ತರಂಗಗಳೇ. ವಾಸನೆಯೂ ಒಂದು ತರಂಗ; ಸ್ಪರ್ಶ ಒಂದು ತರಂಗ ; ಮನಸ್ಸಿನಲ್ಲಿ ಬರುವ ಯಾವುದೇ ಆಲೋಚನೆಯೂ ಒಂದು ತರಂಗ. ಆದರೆ ಈ ತರಂಗಗಳನ್ನು ನೀವು ಅರಿಯಲಾಗುತ್ತಿಲ್ಲ. ಆದ್ದರಿಂದ ಮೊದಲು ನೀವು ಶರೀರದ ಮೇಲಿನ ತರಂಗಗಳನ್ನು ಅರಿಯುವುದರಲ್ಲಿ ಸ್ಥಾಪಿತಗೊಳ್ಳಬೇಕು. ಆಮೇಲೆ ಎಲ್ಲವೂ ಅನುಸರಿಸಿ ಬರುತ್ತವೆ.

**ಪ್ರಶ್ನೆ:** ಧಮ್ಮ ಸೇವಕನಿಗೆ ಲೈಂಗಿಕ ದುರಾಚಾರ ಮತ್ತು ಮದ್ಯಪಾನದಿಂದ ದೂರುವಿರುವುದು ಏಕೆ ಅಷ್ಟೊಂದು ಪ್ರಮುಖವಾಗುತ್ತದೆ.

**ಗೋಯಂಕಾಜಿ:** ಧರ್ಮದಲ್ಲಿ ಪ್ರಗತಿ ಹೊಂದಲು ಅವು ಮುಖ್ಯವಾಗುತ್ತವೆ. ಧಮ್ಮ ಸೇವಕನಿಗೆ ಎಲ್ಲ ಶೀಲಗಳೂ ಮುಖ್ಯ, ಆದರೆ ಈ ಎರಡು ಶೀಲಗಳು ಬಹಳ ಮುಖ್ಯವಾಗುತ್ತವೆ.

ನೀವು ಯಾವುದೇ ಮಾದಕ ವಸ್ತುವನ್ನು ಸೇವಿಸಿದರೆ, ನೀವು ಅದರ ದಾಸನಾಗಿರುತ್ತೀರಿ. ನೀವು ಧರ್ಮದಲ್ಲಿ ಪ್ರಗತಿ ಹೊಂದಲು ಸಾಧ್ಯವಿಲ್ಲ; ಮನಸ್ಸು ದಾಸ್ಯಕ್ಕೊಳಗಾದಾಗ ಅದನ್ನು ಸಮತೋಲನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ನೀವು ನಿಮ್ಮ ಒಡೆಯರಾಗಬೇಕು. ಆದರೆ ಮಾದಕ ವಸ್ತು ಸೇವನೆಯು ನಿಮ್ಮನ್ನು ನಿಮ್ಮ ಒಡೆಯರನ್ನಾಗಿ ಮಾಡುವುದಿಲ್ಲ.

ಅದೇ ರೀತಿ ಲೈಂಗಿಕ ದುರಾಚಾರ ; ಧರ್ಮದ ಅಭ್ಯಾಸ ಮಾಡುತ್ತಾ ಗಂಡ–ಹೆಂಡತಿ ಇಬ್ಬರೂ ಸ್ವಾಭಾವಿಕವಾಗಿಯೇ ಬ್ರಹ್ಮಚರ್ಯ ಪಾಲಿಸುವ ಹಂತವನ್ನು ತಲುಪುತ್ತಾರೆ. ಆದರೆ ಒಬ್ಬರಿಗಿಂತ ಹೆಚ್ಚು ಜನರೊಡನೆ ಲೈಂಗಿಕ ಸಂಪರ್ಕವಿಟ್ಟುಕೊಂಡರೆ, ಕಾಮಾಸಕ್ತಿಯು ಹೆಚ್ಚುತ್ತಾ ಹೋಗುತ್ತದೆ. ಅದು ಹೇಗೆಂದರೆ, ನೀವು ನಂದಿಸಲು ಪ್ರಯತ್ನಿಸುವ ಬೆಂಕಿಗೆ ಪೆಟ್ರೋಲ್ ಸುರಿದಂತೆ.

ಆದ್ದರಿಂದ, ಮೊದಲನೆಯ ಶಿಸ್ತೆಂದರೆ, ಗಂಡ–ಹೆಂಡಿರ ಮಧ್ಯೆ ಮಾತ್ರ ಲೈಂಗಿಕ ಸಂಬಂಧ ಇರಬೇಕು, ಬೇರೆಯವರೊಡನೆ ಅಲ್ಲ. ಇಬ್ಬರೂ ವಿಪಶ್ಯನ ಸಾಧಕರಾಗಿದ್ದರೆ, ಲೈಂಗಿಕಾಸಕ್ತಿ ಬಂದಾಗ, "ಈಗ ನನ್ನ ಮನಸ್ಸಿನಲ್ಲಿ ಕಾಮಾಸಕ್ತಿ ಬಂದಿದೆ" ಎಂಬ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಆ ಸಮಯದಲ್ಲಿ ಶರೀರದಲ್ಲಿ ಬರುವ ಸಂವೇದನೆಗಳನ್ನು ಗಮನಿಸುತ್ತಾರೆ. ಸಂವೇದನೆಗಳನ್ನು ಗಮನಿಸುತ್ತಾ ಬಹುಶಃ ಅವರು ಕಾಮಾಸಕ್ತಿಯಿಂದ ಹೊರಬರುತ್ತಾರೆ. ಆದರೆ ಅವರು ಕಾಮಾಸಕ್ತಿಯಿಂದ ಹೊರಬರಲು ಸಾಧ್ಯವಾಗದೆ, ಲೈಂಗಿಕತೆಯಲ್ಲಿ ತೊಡಗಿದರೆ ತಪ್ಪಿಲ್ಲ. ಏಕೆಂದರೆ ಅವರು ಅವರ ಶೀಲವನ್ನು ಮುರಿದಿಲ್ಲ. ಈ ರೀತಿ ಕೆಲಸ ಮಾಡುತ್ತಾ ಕಾಮಾಸಕ್ತಿಯಿಂದ ಹೊರಬಂದು ಸಂತೋಷ ಮತ್ತು ಸಂತೃಪ್ತಿಯಿಂದ ಬದುಕಿದ ಅನೇಕ ಜನರನ್ನು ನಾನು ಕಂಡಿದ್ದೇನೆ. ಬಯಕೆ ಬರುವುದಿಲ್ಲ. ವಾಸ್ತವವಾಗಿ ಲೈಂಗಿಕ ಸಂಬಂಧವನ್ನು ಪ್ರಕೃತಿಯು ಸಂತಾನೋತ್ಪತ್ತಿಗಾಗಿ ಸೃಷ್ಟಿಸಿದೆ. ಆದರೆ ಮನುಷ್ಯರು ಮಾತ್ರ ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ಕಾಮತೃಪ್ತಿಗಾಗಿ ಅದನ್ನು ಉಪಯೋಗಿಸುತ್ತಾರೆ.

ನೀವು ವಿಪಶ್ಯನದಲ್ಲಿ ಕೆಲಸ ಮಾಡಿದರೆ ನಿಧಾನವಾಗಿ ಕಾಮಾಸಕ್ತಿಯಿಂದ ಹೊರಬರುತ್ತೀರಿ ಮತ್ತು ಸ್ವಾಭಾವಿಕವಾಗಿ ಬ್ರಹ್ಮಚರ್ಯ ಪಾಲಿಸುವ ಹಂತವನ್ನು ತಲುಪುತ್ತೀರಿ. ಕಾಮಾಸಕ್ತಿಯನ್ನು ಹತ್ತಿಕ್ಕುವುದರ ಮೂಲಕ ಪಡೆಯುವ ಬ್ರಹ್ಮಚರ್ಯವು ಸಹಾಯ ಮಾಡುವುದಿಲ್ಲ. ಸ್ವಾಭಾವಿಕವಾದ ಈ ಬ್ರಹ್ಮಚರ್ಯವು ಧಮ್ಮದಲ್ಲಿ ನೀವು ಬೆಳೆಯಲು ಸಹಾಯ ಮಾಡುತ್ತದೆ. ನೀವು ಈ ಹಂತ ತಲುಪಿದಾಗ ವೇಗವಾಗಿ ಅಭಿವೃದ್ಧಿ ಹೊಂದುತ್ತೀರಿ.

**ಭವತು ಸಬ್ಬ ಮಂಗಳಂ**
**(ಎಲ್ಲಾ ಜೀವಿಗಳಿಗೂ ಮಂಗಳವಾಗಲಿ)**

******

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು:**ಸೆಪ್ಟಂಬರ್ 11–22,ಅಕ್ಟೋಬರ್ 3–14, 16–27,30–10 ನವೆಂಬರ್ 13–24, 27–8 ಡಿಸೆಂಬರ್ 11–22.

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. ಇ–ಮೇಲ್ : info@ paphulla. dhamma. org;website; www.vridhamma. org.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, # 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
# 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ,
ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004.

ಗೆ,